**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ**

ಓ.ಎಸ್ ಸಂಖ್ಯೆ- **13/2024**

| | |
|---|---|
| ಸಾಕ್ಷಿಯ ಹೆಸರುಃ | ವಿನೋದಕುಮಾರ್ |
| ತಂದೆಯ ಹೆಸರುಃ | ಜಯಣ್ಣ |
| ವಯಸ್ಸುಃ | 32 ವರ್ಷ |
| ಉದ್ಯೋಗಃ | ಭೂ ಮಾಪಕರು, ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿ, ಸಾಗರ |
| ವಾಸಸ್ಥಳಃ | ಶಿವಮೊಗ್ಗ. |

ದಿ. 22.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎ.ಎನ್. ಟಿ ವಕೀಲರಿಂದ ,**

1. ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿರುವ ಕಾರಣ ಈ ದಿವಸ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯವನ್ನು ನುಡಿಯುತ್ತಿರುತ್ತೇನೆ. ನಿಪಿ-08 ಹದ್ದುಬಸ್ತು ನಕ್ಷೆಯನ್ನು ನಾನೇ ತಯಾರು ಮಾಡಿರುತ್ತೇನೆ ಮತ್ತು ಅದರಲ್ಲಿರುವ ಸಹಿ ನನ್ನದೆ ಇರುತ್ತದೆ. ನಿಪಿ-08 ನಕ್ಷೆಯಲ್ಲಿ 11 ಗುಂಟೆ ಜಮೀನನ್ನು ಸರ್ವೆ ನಂ. 01/04 ರ ಮಾಲೀಕರು ಹೊತ್ತುವರಿ ಮಾಡಿರುತ್ತಾರೆಂದು ತೋರಿಸಿರುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಆರ್.ಪಿ ವಕೀಲರಿಂದ**

**01.** ನಾವು ಸರ್ವೇ ಕಾರ್ಯ ಪ್ರಾರಂಭ ಮಾಡುವುದಕ್ಕಿಂತ ಪೂರ್ವದಲ್ಲಿ ಆಜುಬಾಜುದಾರರಿಗೆ ನೋಟಿಸನ್ನು ನೋಡಿ ಸ್ಥಳ ಮಹಜರ್ ಮಾಡುತ್ತೇವೆಂದರೆ ಸರಿ. ನಮ್ಮ ಕಚೇರಿಯಿಂದ ಆಜುಬಾಜುದಾರರಿಗೆ ನೋಡಿದ ನೋಟಿಸ್ಸಿನ ಪ್ರತಿ ನಮ್ಮ ಬಳಿ ಇರುತ್ತದೆ. ಪ್ರತಿವಾದಿ 01 ಮತ್ತು 02 ರವರಿಗೆ ನಮ್ಮ ಕಚೇರಿಯಿಂದ ನೋಟಿಸನ್ನು ಕೊಟ್ಟಿರುವುದಿಲ್ಲ. ಸರ್ವೇ ಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಪ್ರತಿವಾದಿಗಳು

ಆಜುಬಾಜುದಾರರು ಎಂದು ಹೇಳಿ ನನಗೆ ಗೊತ್ತಿರುವುದಿಲ್ಲ, ನಾನು ಕೇವಲ ವಾದಿ ಜಮೀನನ್ನು ಅಳತೆ ಮಾಡಿ ನಕ್ಷೆ ತಯಾರು ಮಾಡಿರುತ್ತೇನೆ. Survey Manual ಪ್ರಕಾರ ಉತ್ತರ ದಿಕ್ಕಿನಿಂದ ಸರ್ವೇ ಮಾಡಬೇಕು. ಉತ್ತರ ದಿಕ್ಕಿನಲ್ಲಿ ಗ್ರಾಮಠಾಣಾದಲ್ಲಿ ಎರಡು ಕಲ್ಲುಗಳು ಇರುತ್ತವೆ.

**02.** ಬಂಡಾರಳ್ಳಿ ಗ್ರಾಮದ ಸರ್ವೆ ನಂ. 01 ಜೋಡಿ ಇನಾಮ್ ಜಮೀನು ಎಂದರೆ ನನಗೆ ಗೊತ್ತಿರುವುದಿಲ್ಲ. ಬಂಡಾರಳ್ಳಿ ಗ್ರಾಮದ ಸರ್ವೆ ನಂ. 01 ಎಷ್ಟು ವಿಸ್ತೀರ್ಣ ಇರುತ್ತದೆ ಎಂಬುದರ ಬಗ್ಗೆ ನಮ್ಮ ಬಳಿ ದಾಖಲೆ ಇರುತ್ತದೆ ನನಗೆ ಸರ್ವೆ ನಂ. 01 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಆರ್.ಆರ್ ನಕ್ಷೆಯನ್ನು ತೋರಿಸಿ ಅದರ ಪ್ರಕಾರ ಸರ್ವೆ ನಂ. 01 ರಲ್ಲಿ 04 ಎಕರೆ 29 ಗುಂಟೆ ಇರುತ್ತದೆ ಎಂದರೆ ಸರಿ ಮತ್ತು 15 ಗುಂಟೆ ಖರಾಬು ಜಮೀನು ಸಹ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಸರ್ವೆ ನಂ.01 ರ ಹಿಸ್ಸಾ ಸರ್ವೆ ಪಕ್ಕಾ ಪುಸ್ತಕವನ್ನು ನೋಡಿ ಗುರುತಿಸಿ ಒಪ್ಪಿಕೊಂಡಿದ್ದು, ಅದನ್ನು ನಿಡಿ–05 ಎಂದು ಗುರುತಿಸಲಾಯಿತು. ನಿಡಿ–05 ರ ಪ್ರಕಾರ 04 ಎಕರೆ 14 ಗುಂಟೆ ಸಾಗುವಳಿಗೆ ಯೋಗ್ಯವಾದ ಜಮೀನು ಇರುತ್ತದೆ ಎಂದರೆ ಸರಿ. ನಿಡಿ–05 ರಲ್ಲಿ ಸಾಗುವಳಿದಾರರ ಹೆಸರು ಮತ್ತು ವಿಸ್ತೀರ್ಣ ನಮೂದಾಗಿದೆ ಎಂದರೆ ಸರಿ. ನಿಡಿ–05 ರ ಪ್ರಕಾರ 05 ಪೋಡಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸರ್ವೆ ನಂ. 01 ರ ಮತ್ತೊಂದು ಸರ್ವೆ ಪಕ್ಕಾ ಪುಸ್ತಕವನ್ನು ನೋಡಿ ಗುರುತಿಸಿ ಒಪ್ಪಿಕೊಂಡಿದ್ದು, ಅದನ್ನು ನಿಡಿ–06 ಎಂದು ಗುರುತಿಸಲಾಯಿತು. ನಿಡಿ–06 ರಲ್ಲಿ ಉತ್ತರ ದಿಕ್ಕಿನಲ್ಲಿ ರಸ್ತೆ ಆದು ಹೋಗಿರುವ ಬಗ್ಗೆ ನಮೂದು ಮಾಡಿರುತ್ತಾರೆಂದರೆ ಸರಿ. ಸರ್ವೆ ನಂ. 01 ರ ಸಂಪೂರ್ಣ ಜಮೀನನ್ನು

ನಾನು ಅಳತೆ ಮಾಡಿರುತ್ತೇನೆ. ಸರ್ವೆ ನಂ. 01 ರಲ್ಲಿ ರಸ್ತೆ ಮತ್ತು ಹೊತ್ತುವರಿದಾರರ ಬಗ್ಗೆ ತೋರಿಸಿರುವುದಿಲ್ಲ ಏಕೆಂದರೆ ಅರ್ಜಿದಾರರೊಬ್ಬರೆ ತಮ್ಮ ಜಮೀನನ್ನು ಅಳತೆ ಮಾಡಿ ಎಂದು ಕೇಳಿರುವ ಕಾರಣ ಅವರ ಜಮೀನಿನಲ್ಲಿ ಹೊತ್ತುವರಿ ಇರುವುದನ್ನು ಮಾತ್ರ ತೋರಿಸಿರುತ್ತೇನೆ. ವಾದಿಗೆ ಸೇರಿದ ಸರ್ವೆ ನಂ.01/6 ರ ಉತ್ತರ ದಿಕ್ಕಿನಲ್ಲಿ ಅವರ ಜಮೀನನ್ನು ಹೊತ್ತುವರಿ ಮಾಡಿಕೊಂಡು ಮನೆಗಳನ್ನು ಕಟ್ಟಿರುತ್ತಾರೆಂದರೆ ಸಾಕ್ಷಿಯು ನನಗೆ ಈಗ ಹೇಳಲು ನೆನಪಿರುವುದಿಲ್ಲ ಎಂದು ಹೇಳುತ್ತಾರೆ. ವಾದಿಗೆ ಸೇರಿದ ಸರ್ವೆ ನಂ. 01/6 ರ ಉತ್ತರ ಭಾಗದಲ್ಲಿ ರಸ್ತೆ ಮತ್ತು ಮನೆಗಳನ್ನು ಗ್ರಾಮಸ್ಥರು ಕಟ್ಟಿರುತ್ತಾರೆ ಅದನ್ನು ನಾನು ಉದ್ದೇಶಪೂರ್ವಕವಾಗಿ ತೋರಿಸದೆ ಪ್ರತಿವಾದಿಯ ಜಮೀನಿನಲ್ಲಿ ಹೊತ್ತುವರಿ ಇದೆ ಎಂದು ಹೇಳಿ ಸುಳ್ಳು ನಕ್ಷೆ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಉದ್ದೇಶಕ್ಕಾಗಿ ನಾನು ಪ್ರತಿವಾದಿಗಳಿಗೆ ಅಳತೆ ಪೂರ್ವದಲ್ಲಿ ನೋಟಿಸ್ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.01 ಅನ್ನು ಸಂಪೂರ್ಣವಾಗಿ ಅಳತೆ ಮಾಡಿದಾಗ ಮಾತ್ರ ಎಲ್ಲಿ ವಾದಿಯ ಜಮೀನು ಹೊತ್ತುವರಿಯಾಗಿದೆ ಎಂದು ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ನಾನು ಸರ್ವೆ ನಂ.01ರ ಸಂಪೂರ್ಣ ವಿಸ್ತೀರ್ಣವನ್ನು ಅಳತೆ ಮಾಡದೆ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯ ಮಾತುಕೇಳಿಕೊಂಡು ನಾನು ಸುಳ್ಳು ನಕ್ಷೆಯನ್ನು ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಯಾರಿಗೆ ನೋಟಿಸ್ ಕೊಡಬೇಕೆಂದು ಹೇಳಿರುತ್ತಾರೋ ಅವರಿಗೆ ಮಾತ್ರ ನೋಟಿಸ್ ಅನ್ನು ಕೊಟ್ಟಿರುತ್ತೇವೆ. ಸರ್ವೆ ನಂ.01/06 ರ ಪಶ್ಚಿಮ ದಿಕ್ಕಿಗೆ ಸರ್ವೆ ನಂ.01/04 ಬರುತ್ತದೆ. ನಾನು ಸರ್ವೆ ನಂ. 01/04 ಅನ್ನು ಅಳತೆ ಮಾಡಿರುವುದಿಲ್ಲ. ನಾನು ಉದ್ದೇಶಪೂರ್ವಕವಾಗಿ ವಾದಿಯಜಮೀನನ್ನುಮಾತ್ರ ಅಳತೆ ಮಾಡಿರುತ್ತೇನೆ

ಎಂದಂರೆ ಸಾಕ್ಷಿಯ ಅವರು ಅರ್ಜಿ ಕೊಟ್ಟಿದ್ದರಿಂದ ಅವರ ಜಾಗವನ್ನು ಮಾತ್ರ ಅಳತೆ ಮಾಡಿರುವುದಾಗಿ ಹೇಳುತ್ತಾರೆ. ಸರ್ವೆ ನಂ. 01/04 ರ ಮಾಲೀಕರು ಈ ಹಿಂದೆ ಹದ್ದು ಬಸ್ತ ಪೋಡಿ ಮಾಡಿಸಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ಆ ದಾಖಲೆಯ ಪ್ರಕಾರ ಅವರ ಜಾಗ 30 ಗುಂಟೆ ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ.

**ಮರುವಿಚಾರಣೆ ಇಲ್ಲಃ**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓ.ಹೇ. ಕೇ. ಸ. ಇದೆ

**(ರಾಘವೇಂದ್ರ. ಡಿ.)**
ಪ್ರ.ಹಿ.ಸಿ.ನ್ಯಾಯಾಧೀಶರು,ಭದ್ರಾವತಿ